ಎಂ ವಿ ಸಿ ಸಂಖ್ಯೆ 446/2024

ಆರ್ ಡಬ್ಲ್ಯೂ-1

**(ದಿನಾಂಕ 06.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಖ್ಯ ವಿಚಾರಣೆ ಎದುರುದಾರರ ಪರ ಶ್ರೀ ವಿ ಜಿ ಪಿ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ.

ಅಥರೈಜೇಶನ್ ಪತ್ರ ನಿ ಆರ್ 1 ಎಂದು, ಪರಿಹಾರ ಪಾವತಿಯ ರಸೀದಿಯ ನಕಲು ನಿ ಆರ್ 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಡಿ ಓ ವಕೀಲರಿಂದಃ-**

07.12.2023 ರಂದು ನಾನು ಲಿಂಗಸೂರಿನಿಂದ ಕಡೂರಿಗೆ ಹೋಗುತ್ತಿದ್ದೆ ನಂದಿ ರೆಸಾರ್ಟ ಹತ್ತಿರ ನನ್ನ ಬಸ್ಸಿನಿಂದಲೇ ಅಪಘಾತ ಜರುಗಿರುತ್ತದೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಎದುರುಗಡೆ ಕುರಿಗಳು ಬಂದವು ಎಂದರೆ ಸರಿ. ನಾನು ರಸ್ತೆಯ ಬಲಭಾಗಕ್ಕೆ ಬಂದಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಕುರಿಗಳನ್ನು ಓವರಟೇಕ್ ಮಾಡಲು ರಸ್ತೆಯ ಬಲಭಾಗಕ್ಕೆ ಬಂದಿದ್ದು ಶಿವರಾಜನಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರವನ್ನು ಬರೆಯಲು ನಾನೇ ಕೊಟ್ಟಿರುತ್ತೇನೆ. ಶಿವರಾಜನನ್ನು ಮೊದಲು ಹರಪನಹಳ್ಳಿ ಸರ್ಕಾರಿ ಆಸ್ಪತ್ರೆಗೆ ನಂತರ ದಾವಣಗೆರೆ ನಂಜಪ್ಪ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಪೋಲೀಸರು ನನ್ನ ವಿರುದ್ಧ ಪ್ರಥಮ ವರ್ತಮಾನ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನಾನು ದೋಷಾರೋಪಣ ಪಟ್ಟಿಯನ್ನು ಎಲ್ಲಿಯು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ನನಗೆ ಡಿ ಎಲ್ ಇದೆ. ಬಸ್ಸಗೆ ವಿಮೇ ಇದೆ ಎಂದರೆ ಸರಿ. ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.